ದಿನಾಂಕಃ21-06-2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಯು.ಡಿ.ಡಿ ವಕೀಲರಿಂದಃ**

ನಿ.ಪಿ-1 ದೂರಿನಲ್ಲಿ (ಪಿರ್ಯಾದು) ಏನು ವಿಷಯ ಬರೆದಿದೆ ಎನ್ನುವುದನ್ನು ನಾನು ಸದರಿ ದೂರನ್ನು ಸ್ವೀಕರಿಸುವ ಸಮಯದಲ್ಲಿ ನೋಡಿದ್ದೇನೆ. ನಾನು ಸ್ವೀಕರಿಸಿ ಕೊಂಡ ನಿ.ಪಿ-1 ದೂರಿನ 2 ನೇ ಪುಟ ಸಂಖ್ಯೆ ಯ 3 ನೇ ಪ್ಯಾರಾದಲ್ಲಿ ನಮೂದಿಸಿರುವ " 1 ನೇ ಆರೋಪಿ ತಮ್ಮ ಉದ್ಯೋಗ ವ್ಯವಹಾರಕ್ಕಾಗಿ ಸದರಿ ದಿ ವರ್ಧಮಾನ ಕೊ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್ , ರಾಣೇಬೆನೂನರು ಇವರಿಂದ 3 ಲಕ್ಷ ರೂಪಯಿಗಳನ್ನು ದಿಃ 03-09-2001 ರಂದು ಪಡೆದಿದ್ದು ........... .................. ....................... " ಎನ್ನುವ ಬಗ್ಗೆ ನಮೂದಿಸಿರುವ ವಿಷಯದ ಬಗ್ಗೆ ನಿ.ಪಿ-2 ರಂತೆ ಪಂಚನಾಮೆ ಮಾಡುವ ಸಮಯದಲ್ಲಿ ನಾನು ದಾಖಲೆಗಳನ್ನು ಪಡೆದು ಕೊಂಡಿದ್ದೇನೆ . ಸದರಿ ನಿ.ಪಿ-2 ರಂತೆ ಪಂಚನಾಮೆ ಮಾಡುವ ಸಮಯದಲ್ಲಿ ನಾನು ನಿ.ಪಿ-3 ರಿಂದ ನಿ.ಪಿ-8 ರ ದಾಖಲೆಗಳನ್ನು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪಡೆದು ಕೊಂಡಿದ್ದೇನೆ . ನಿ.ಪಿ-3 ಸಾಲ ಬೇಡುವ ಅರ್ಜಿಯ ಶಿರ್ಷಿಕೆಯು " The Vardhaman Co-operative Bank Ltd, Hubballi " ಎಂದು ನಮೂದಿಸಲಾಗಿದೆ ಎಂದರೆ ಸರಿ.

ನಿ.ಪಿ–3 ದಾಖಲೆ ರಾಣೇಬೆನ್ನೂರಿನ ಬ್ಯಾಂಕ್ ಗೆ ಸಂಬಂಧಪಟ್ಟ ದಾಖಲೆ ಆಗಿರುವುದಿಲ್ಲ ಅದು ಹುಬ್ಬಳ್ಳಿ ಶಾಖೆಗೆ ಸಂಬಂಧಪಟ್ಟ ದಾಖಲೆ ಆಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದರಿ ನಿ.ಪಿ–3 ರ ದಾಖಲೆಯನ್ನು ತಾನು ಹುಬ್ಬಳ್ಳಿ ಬ್ಯಾಂಕ್ ನಿಂದ ಪಡೆದುಕೊಂಡ ದಾಖಲೆ ಆಗಿರುತ್ತದೆ ಎಂದು ನುಡಿಯುತ್ತಾರೆ . ನಾನು ಪಡೆದು ಕೊಂಡಿರುವ Ex.P–4 Promissory Note and Ex.P–5 Cheque ಸಹ ಹುಬ್ಬಳ್ಳಿ ಶಾಖೆಯ ದಾಖಲೆಗಳು ಆಗಿವೆ ಎಂದರೆ ಸರಿ. Ex.P–6 Memorandum of deposit of Title Deed ರ ದಾಖಲೆ ಹುಬ್ಬಳ್ಳಿಯಶಾಖೆಯವರು ರಾಣೇಬೆನ್ನೂರು ಬ್ಯಾಂಕ್ ನ ಶಾಖೆಯಲ್ಲಿ ಸಾಲದ ಭದ್ರತೆಗೊಸ್ಕರ ರಾಣೇಬೆನ್ನೂರಿನ ಶಾಖೆಯಲ್ಲಿ execute ಮಾಡಿ ಎಂದು ಹೇಳಿ ಎಂದು ಯಾವುದಾದರೂ ದಾಖಲೆಯನ್ನು ನೀಡಿದ್ದಾರಾ ಎನ್ನುವ ಬಗ್ಗೆ ನಿ.ಪಿ–2 ಪಂಚನಾಮೆಯ ಸಮಯದಲ್ಲಿ ದಾಖಲೆಗಳನ್ನು ಪರಿಶೀಲಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆಗಳನ್ನು ತಾನು ಪರಿಶೀಲಿಸಿರುವುದಿಲ್ಲ ಎಂದು ನುಡಿಯುತ್ತಾರೆ .

ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಬೇಡಿದ್ದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/–

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.